ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.

ಸಿ ಸಿ ನಂ. 782/2014

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಬಸವಣ್ಣ | ಪಿ ಡಬ್ಲ್ಯೂಃ | 6 |
| ತಂದೆಯ / ಗಂಡನ ಹೆಸರು | ಃ | ವೀರಣ್ಣ | ಸಿ ಡಬ್ಲ್ಯೂಃ | 7 |
| ವಯಸ್ಸು | ಃ | 55 ವರ್ಷ | ಡಿ ಡಬ್ಲ್ಯೂಃ | |
| ಉದ್ಯೋಗ | ಃ | ಅರ್ಚಕರು | ಆರ್ ಡಬ್ಲ್ಯೂಃ | |
| ವಾಸಸ್ಥಳ | ಃ | ಗಂಗವಾಡಿ ಗ್ರಾಮ | ಪ್ರ.ವ.ಬೋ. ದಿಃ 06.02.2018 | |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ಚಾಸಾ 1 ರಿಂದ 6 ಮತ್ತು 8 ಮತ್ತು 11 ರವರ ಪರಿಚಯ ನನಗಿದೆ. ನಾನು ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಅರ್ಚಕನಾಗಿ ನನ್ನ ತಂದೆ ಕಾಲದಿಂದಲೂ ಕೆಲಸ ಮಾಡುತ್ತಿದ್ದೇನೆ. ಸುಮಾರು 3 ವರ್ಷಗಳ ಹಿಂದೆ ನಮ್ಮ ದೇವಸ್ಥಾನದಲ್ಲಿ ರಾತ್ರಿ ಸಮಯದಲ್ಲಿ ನಾನು ಕೆಲಸದವರಿಗೆ ಊಟ ಬಡಿಸಿ ಮಲಗಿದ್ದೆ. ಮಾರನೇ ದಿನ ಬೆಳಿಗ್ಗೆ ನಾನು ಬಂದು ನೋಡಿದಾಗ ಕಳುಹಿವಾಗಿತ್ತು. ಅಮ್ಮನವರ ಗುಡಿಯ ಬಾಗಿಲು ಮುರಿದಿತ್ತು ಹುಂಡಿಯಲ್ಲಿನ ಹಣವನ್ನು ಕಳುಮಾಡಿದ್ದರು. ಈ ವಿಚಾರವನ್ನು ಚಾಸಾ 4 ರವರಿಗೆ ನಾನು ತಿಳಿಸಿದೆನು. ಚಾಸಾ 4 ರವರು ಚಾಸಾ 1 ರವರಿಗೆ ವಿಚಾರವನ್ನು ತಿಳಿಸಿದರು. ಚಾಸಾ 1 ರವರು ಪೋಲಿಸರಿಗೆ ಈ ಬಗ್ಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ಚಾಸಾ 1 ರವರು ಈ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿರುತ್ತಾರೆ. ಆ ಸಮಯದಲ್ಲಿ ಚಾಸಾ 11 ರವರು ದೇವಸ್ಥಾನದಲ್ಲಿ ಕಾವಲುಗಾರರಾಗಿ ಕೆಲಸವನ್ನು ಮಾಡುತ್ತಿದ್ದರು. ಈ ಬಗ್ಗೆ ಪೋಲಿಸರಿಗೆ ನನ್ನ ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿದಿದ್ದು, ಅನುಮತಿ ನೀಡಿದೆ.)

ಪಾಟೀ ಸವಾಲುಃ ಎಪಿಪಿ ರವರಿಂದಃ

ದಿನಾಂಕ 23.10.2013 ರಂದು ಎಂದಿನಂತೆ ಬೆಳಿಗ್ಗೆ ಯಿಂದ ದೇವಸ್ಥಾನದಲ್ಲಿ ಕೆಲಸ ಮಾಡಿಕೊಂಡಿದ್ದೇನು. ರಾತ್ರಿ 8.30 ಗಂಟೆ ಸಮಯದಲ್ಲಿ ದೇವಸ್ಥಾನದ ಕಾವಲುಗಾರರಾದ ಮಲ್ಲಿಕಾರ್ಜುನ ಮರಿಸ್ವಾಮಿ ಮತ್ತು ಮಾದಯ್ಯನ ಮಗ ಮಲ್ಲಿಕಾರ್ಜುನ ರವರುಗಳು ಕೆಲಸಕ್ಕೆ ಬಂದಿದ್ದು ಅವರಿಗೆ ರಾತ್ರಿ ಸುಮಾರು 8.45 ಗಂಟೆ ಸಮಯದಲ್ಲಿ ಊಟವನ್ನು ಕೊಟ್ಟು ನಂತರ ನಾನು ಮತ್ತು ಇತರೆ ಅರ್ಚಕರು ಹಾಗೂ ಅರ್ಚಕ ಸಹಾಯಕರುಗಳಾದ ನಾಗರಾಜು ಸಿದ್ದಗಂಗಣ್ಣ ನಾಗರಾಜು ಮತ್ತು ಪ್ರಾಧನ ಅರ್ಚಕರಾದ ನಟರಾಜ ಮೂರ್ತಿ ರವರುಗಳು ಊಟ ಮಾಡಿ

ಪಾಕಶಾಲೆಯಲ್ಲಿ ನಮ್ಮ ಅರ್ಚಕರು ಗಳೊಟ್ಟದೆ ಮಲಗಿದೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ ಸುಮಾರು 4.30 ಗಂಟೆ ಸಮಯದಲ್ಲಿ ಮಾದಯ್ಯನ ಮೊಮ್ಮಗ ಮಲ್ಲಿಕಾರ್ಜುನ ನಮ್ಮ ಬಳಿ ಬಂದು ಅಮ್ಮನವರ ಗುಡಿಯ ಬಾಗಿಲನ್ನು ಹೊಡೆದು ಗೋಲಕದಲ್ಲಿದ್ದ ಹಣವನ್ನು ಯಾರೋ ಕಳ್ಳತನಮಾಡಿಕೊಂಡು ಹೋಗಿದ್ದಾರೆಂದು ತಿಳಿಸಿದ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ಅರ್ಚಕರುಗಳು ಮತ್ತು ಕಾವಲುಗಾರರಾದ ಮಲ್ಲಿಕಾರ್ಜುನ ಮರಿಸ್ವಾಮಿರವರುಗಳು ಗಾಬರಿಯಿಂದ ಅಲ್ಲಿಗೆ ಹೋಗಿ ನೋಡಲಾಗಿ ಅಮ್ಮನವರು ಗುಡಿಯ ದಕ್ಷಿಣದ್ವಾರವನ್ನು ಯಾರೋ ಕಳ್ಳರು ಮುರಿದು ಒಳಗೆ ಹೋಗಿ ಗೋಲಕದಲ್ಲಿದ್ದ ಹಣವನ್ನು ಕಳ್ಳತನಮಾಡಿಕೊಂಡು ಹೋಗಿದ್ದು ಈ ವಿಚಾರವನ್ನು ದೇವಸ್ಥಾನದ ಕಾರ್ಯ ನಿರ್ವಹಣಾ ಅಧಿಕಾರಿಗಳಾದ ರಾಜಶೇಖರ ಮೂರ್ತಿ ರವರಿಗೆ ತಿಳಿಸಿದೆವು ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದರು ಸಹ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಸದರಿ ಹೇಳಿಕೆಯನ್ನು ನಿಪಿ–5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಾಗಿರುತ್ತಾರೆ ಆರೋಪಿ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ಓ ಹೇ ಕೇ ಸ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ತಿ.ನರಸೀಪುರ.